ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,
ತಿ ನರಸೀಪುರ

<u>ಸಿ ಸಿ ಸಂಖ್ಯೆ: **287/2015**</u>

## **<u>ದೋಷಾರೋಪಣೆ</u>**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ತಿ ನರಸೀಪುರ ಆದ ನಾನು

1. ಎ ಹೆಚ್ ನಾಗರಾಜು ಬಿನ್ ಲೇ ಹೊನ್ನಯ್ಯ
   **(ಮೃತಪಟ್ಟಿರುತ್ತಾರೆ)**

2. ರಾಜಶೇಖರ್ ಬಿನ್ ಲೇ ನಂಜುಂಡಸ್ವಾಮಿ,
   49 ವರ್ಷ, ದ್ವಿತೀಯ ದರ್ಜೆ ಸಹಾಯಕರು,
   ಪಟ್ಟಣ ಪಂಚಾಯಿತಿ, ತಿ ನರಸೀಪುರ ಪಟ್ಟಣ.
   ಹಾಲಿ ಕೆಲಸ : ಪುರಸಭೆ ಕಾರ್ಯಾಲಯ,
   ಹುಣಸೂರು.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪ ಎನೆಂದರೇಃ-

ಮೊದಲನೆಯದಾಗಿ, 2007-2008 ಮತ್ತು 2008-2009 ನೇ ಸಾಲಿನ ದಿನಾಂಕ 13.08.2009 ಮತ್ತು 14.08.2009 ರ ಅವಧಿಯಲ್ಲಿ ತಿ. ನರಸೀಪುರ ಪಟ್ಟಣ ಪಂಚಾಯಿತಿಯಲ್ಲಿ, ಮೃತ 1 ನೇ ಆರೋಪಿತ ಅದರ ಮುಖ್ಯಾಧಿಕಾರಿಯಾಗಿದ್ದು ಮತ್ತು 2 ನೇ ಆರೋಪಿತರಾದ ನೀವು ಅದರ ದ್ವಿತೀಯ ದರ್ಜೆ ಸಹಾಯಕರಾಗಿದ್ದು, ನೀವಿಬ್ಬರೂ ಹಣಕಾಸಿನ ವ್ಯವಹಾರದ ಜವಾಬ್ದಾರಿಯನ್ನು ಹೊಂದಿದ್ದು, ರಾಜ್ಯ ಹಣಕಾಸು ಆಯೋಗ,

12 ನೇ ಹಣಕಾಸು ಯೋಜನೆ, ಪಟ್ಟಣ ಪಂಚಾಯಿತಿಯ ನೀರು ನಿರ್ವಾಹಣೆಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಸರಿಯಾಗಿ ನಿರ್ವಹಿಸಿದೆ, ಒಂದು ನಿಧಿಯಿಂದ ಮತ್ತೊಂದು ನಿಧಿಗೆ ಹಣವನ್ನು ವರ್ಗಾಯಿಸಿ, ಬ್ಯಾಂಕಿನಿಂದ ಹಣವನ್ನು ಪಡೆದು, ಸರ್ಕಾರದಿಂದ ಮಂಜೂರಾದ ಹಣವನ್ನು ಅದೇ ಕಾರ್ಯಕ್ರಮಕ್ಕೆ ಉಪಯೋಗಿಸದೆ, ಅಧಿಕಾರ ದುರುಪಯೋಗ ಮಾಡಿಕೊಂಡು ಸ್ವಂತಕ್ಕೆ ದುರ್ಬಳಕ್ಕೆ ಮಾಡಿಕೊಂಡು ಸೂಕ್ತ ದಾಖಲೆಗಳನ್ನು ತಪಾಸಣೆ ವೇಳೆಗೆ ಹಾಜರುಪಡಿಸದೆ, ಮೃತ 1 ನೇ ಆರೋಪಿತ ಬೇರೆ ಬೇರೆ ದಿನಾಂಕಗಳಲ್ಲಿ ಸೆಲ್ಫ್ ಚೆಕ್‌ಗಳನ್ನು ಬರೆದು ಸಹಿ ಮಾಡಿ 2 ನೇ ಆರೋಪಿತರಾದ ನಿಮ್ಮ ಮೂಲಕ ಹಣವನ್ನು ಬ್ಯಾಂಕಿನಿಂದ ಪಡೆದುಕೊಂಡು, ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಿಸಿದಂತೆ, ನೀರು ನಿರ್ವಹಣೆಗೆ ದಿನಗೂಲಿಗಳನ್ನು ನೇಮಿಸಿಕೊಂಡ ಬಗ್ಗೆ, ಕಾಮಗಾರಿಗಳಿಗಾಗಿ, ಕೋತಿ ಹಿಡಿಯಲು, ಟ್ರಾಕ್ಟರ್‌ನ್ನು ಬಾಡಿಗೆಗೆ ಪಡೆದು ಅದರ ಚಾಲಕನಿಗೆ ಕೂಲಿ ಹಣ ಪಾವತಿಸಿದ ಬಗ್ಗೆ, ನೀರು ನಿರ್ವಹಣೆ ಸಾಮಗ್ರಿಗಳನ್ನು ಖರೀದಿಸಿರುವ ಬಗ್ಗೆ, ಸಾಮಾನ್ಯ ನಿಧಿಯಲ್ಲಿ ಸಾಮಾನುಗಳನ್ನು ಖರೀದಿಸಿರುವ ಬಗ್ಗೆ, ಪಟ್ಟಣ ಪಂಚಾಯಿತಿ ವತಿಯಿಂದ ವಿವಿಧ ಸಂಸ್ಥೆಗಳಿಂದ ಬ್ಲೀಚಿಂಗ್ ಪೌಡರ್, ಆಲಂ, ವಿದ್ಯುತ್ ಸಾಮಗ್ರಿಗಳನ್ನು, ಪೀಠೋಪಕರಣಗಳನ್ನು ಖರೀದಿಸುವುದಕ್ಕೆ ಸಂಬಂಧಿಸದಂತೆ ಯಾವುದೇ ರಶೀದಿಗಳನ್ನು ಹೊಂದದರೆ ಕೋಟ್ಯಾಂತರ ರೂಪಾಯಿಗಳನ್ನು ಬ್ಯಾಂಕಿನಿಂದ ಪಡೆದು, ಸಂಬಂಧಪಟ್ಟವರಿಗೆ ಪಾವತಿಸಿದ್ದು, ಆದರೆ ಅವುಗಳಿಗೆ ಸಂಬಂಧಿಸಿದಂತೆ ಪಾರದರ್ಶಕ ನಿಯಮಗಳನ್ನು ಅಳವಡಿಸಿಕೊಳ್ಳದೇ ಆ ಮೂಲಕ ಸರ್ಕಾರಕ್ಕೆ ನಂಬಿಕೆ ದ್ರೋಹ ಉಂಟು ಮಾಡುವ ಮೂಲಕ

ಭಾರತೀಯ ದಂಡ ಸಂಹಿತೆ ಕಲಂ 406 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ಅವಧಿ ಮತ್ತು ಸ್ಥಳದಲ್ಲಿ, 2 ನೇ ಆರೋಪಿತರಾದ ನೀವು ಸದರಿ ಪಂಚಾಯಿತಿಯ ದ್ವಿತೀಯ ದರ್ಜೆ ಸಹಾಯಕನಾಗಿದ್ದು, ಈ ಮೇಲೆ ಹೇಳಿದ ಕೃತ್ಯವನ್ನು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.408 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೂರನೇಯದಾಗಿ, ಮೇಲೆ ಹೇಳಿದ ಅವಧಿ ಮತ್ತು ಸ್ಥಳದಲ್ಲಿ, 2 ನೇ ಆರೋಪಿತರಾದ ನೀವು ಸದರಿ ಪಂಚಾಯಿತಿಯಲ್ಲಿ ಸರ್ಕಾರಿ ನೌಕರನಾಗಿದ್ದು, ಈ ಮೇಲೆ ಹೇಳಿದ ಕೃತ್ಯವನ್ನು ಜರುಗಿಸುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.409 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ಅವಧಿ ಮತ್ತು ಸ್ಥಳದಲ್ಲಿ, 2 ನೇ ಆರೋಪಿತರಾದ ನೀವು ಮೃತ 1 ನೇ ಆರೋಪಿತನೊಂದಿಗೆ ಸೇರಿಕೊಂಡು ಚಾಸಾ-1/ವಿ ಟಿ ವಿಲ್ಸನ್ ರವರ ಸಹಿಯನ್ನು ಚೆಕ್ಕುಗಳಗ ಮೇಲೆ ಪೋರ್ಜರಿ ಮಾಡಿ ರೂ.2,28,000/- ಹಣವನ್ನು ಬ್ಯಾಂಕಿನಿಂದ ಪಡೆದು ಸ್ವಂತಕ್ಕೆ ದುರ್ಬಳಕೆ ಮಾಡಿಕೊಳ್ಳುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.468 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಐದನೇಯದಾಗಿ, ಮೇಲೆ ಹೇಳಿದ ಅವಧಿ ಮತ್ತು ಸ್ಥಳದಲ್ಲಿ, 2 ನೇ ಆರೋಪಿತರಾದ ನೀವು ಈ ಮೇಲೆ ಹೇಳಿದ ಕೃತ್ಯವನ್ನು ಮಾಡಿ ಸರಿಯಾದ ದಾಖಲೆಗಳನ್ನು ಈ ಮೇಲೆ ಹೇಳಿದ ವ್ಯವಹಾರಗಳಿಗೆ ಹೊಂದದೇ, ಸುಳ್ಳು ದಾಖಲೆಗಳನ್ನು ಹೊಂದಿ ವ್ಯವಹರಿಸುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.477–ಎ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಆರನೇಯದಾಗಿ, ಮೇಲೆ ಹೇಳಿದ ಅವಧಿ ಮತ್ತು ಸ್ಥಳದಲ್ಲಿ, 2 ನೇ ಆರೋಪಿತರಾದ ನೀವು ಈ ಮೇಲೆ ಹೇಳಿದ ಕೃತ್ಯಗಳಿಗೆ ಸೂಕ್ತ ದಾಖಲೆಗಳನ್ನು ಹೊಂದದೇ ಮತ್ತು ಆ ವ್ಯವಹಾರಗಳ ದಾಖಲೆಗಳನ್ನು ಹಾಜರುಪಡಿಸದೆ ಮುಚ್ಚಿಟ್ಟಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.204 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಏಳನೇಯದಾಗಿ, ಮೇಲೆ ಹೇಳಿದ ಅವಧಿ ಮತ್ತು ಸ್ಥಳದಲ್ಲಿ, 2 ನೇ ಆರೋಪಿತರಾದ ನೀವು ಈ ಮೇಲೆ ಹೇಳಿದ ರೀತಿ ಕೃತ್ಯಗಳನ್ನು ಮಾಡಿ ಬ್ಯಾಂಕಿನಿಂದ ಹಣವನ್ನು ಪಡೆದು ಅದನ್ನು ನಿಮ್ಮ ಸ್ವಂತಕ್ಕೆ ಬಳಸಿಕೊಳ್ಳುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.403 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎಂಟನೇಯದಾಗಿ, ಮೇಲೆ ಹೇಳಿದ ಅವಧಿ ಮತ್ತು ಸ್ಥಳದಲ್ಲಿ, 2 ನೇ ಆರೋಪಿತರಾದ ನೀವು ಈ ಮೇಲೆ ಹೇಳಿದ ರೀತಿ ಕೃತ್ಯಗಳನ್ನು ಮಾಡಿ ಸರ್ಕಾರಕ್ಕೆ ಮೋಸ ಮಾಡುವ ಮೂಲಕ

ಭಾರತೀಯ ದಂಡ ಸಂಹಿತೆ ಕಲಂ.420 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

**ದಿನಾಂಕಃ** 01.02.2024

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಟಿ ನರಸೀಪುರ.**

ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ,

ತಿ ನರಸೀಪುರ

ಸಿ ಸಿ ಸಂಖ್ಯೆ: 287/2015

**ದೋಷಾರೋಪಣೆ**

1. ಎ ಹೆಚ್ ನಾಗರಾಜು ಬಿನ್ ಲೇ ಹೊನ್ನಯ್ಯ
   **(ಮೃತಪಟ್ಟಿರುತ್ತಾರೆ)**

2. ರಾಜಶೇಖರ್ ಬಿನ್ ಲೇ ನಂಜುಂಡಸ್ವಾಮಿ,
   49 ವರ್ಷ, ದ್ವಿತೀಯ ದರ್ಜೆ ಸಹಾಯಕರು,
   ಪಟ್ಟಣ ಪಂಚಾಯಿತಿ, ತಿ ನರಸೀಪುರ ಪಟ್ಟಣ.
   ಹಾಲಿ ಕೆಲಸ : ಪುರಸಭೆ ಕಾರ್ಯಾಲಯ,
   ಹುಣಸೂರು.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?
ಉತ್ತರಃ ಹೌದು

ಪ್ರಶ್ನೆಃ ನೀವು ಸದರಿ ದೋಷಾರೋಪವನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ ವಿಚಾರಣೆಯಾಗಬೇಕು.

(ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

**ದಿನಾಂಕಃ** 01.02.2024

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಟಿ ನರಸೀಪುರ.**